# ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ತೊದಲಬಾಗಿ

## ಅರ್ಧವಾರ್ಷಿಕ ಪರೀಕ್ಷೆ-2021

**ತರಗತಿ: 9 ವಿಷಯ: ಪ್ರಥಮ ಭಾಷೆ ಕನ್ನಡ ಅಂಕಗಳು : 100 ಸಮಯ : 3 ಗಂಟೆ**

**I.** ಈ ಕೆಳಗಿನ ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದ್ದು ಅವುಗಳಲ್ಲಿ ಹೆಚ್ಚು ಸೂಕ್ತವಾದದ್ದನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. $1 \times 6 = 6$

1. ಇವುಗಳಲ್ಲಿ ಅನುಸ್ವಾರ ಮತ್ತು ವಿಸರ್ಗ ಸಹಿತ ಪದವಿದು;
   (ಎ) ಅಂತ:ಪುರ (ಬಿ) ದು:ಖ (ಸಿ) ಅನಂತರ (ಡಿ) ಸನ್ಮಾನ
2. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಎ) ಕರ್ಮಧಾರಯ (ಬಿ) ದ್ವಿಗು (ಸಿ) ತತ್ಪುರುಷ (ಡಿ) ಕ್ರಿಯಾ
3. 'ಮಹರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ;
   (ಎ) ಸವರ್ಣದೀರ್ಘ (ಬಿ) ಗುಣ (ಸಿ) ವೃದ್ಧಿ (ಡಿ) ಯಣ್
4. 'ಸಂಪ್ರದಾನ' ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ;
   (ಎ) ಚತುರ್ಥಿ (ಬಿ) ತೃತೀಯ (ಸಿ) ಸಪ್ತಮಿ (ಡಿ) ಪಂಚಮಿ
5. ರೈತನು ಹೊಲವನ್ನು ಉಳುತ್ತಾನೆ. ಈ ವಾಕ್ಯದಲ್ಲಿರುವ ಕ್ರಿಯಾಪದದ ಧಾತು ಗುರುತಿಸಿ;
   (ಎ) ರೈತ (ಬಿ) ಉಳು (ಸಿ) ಹೊಲ (ಡಿ) ಉಳುತ್ತಾನೆ
6. 'ಹೋದನು' ಕ್ರಿಯಾಪದವು ಈ ಕಾಲರೂಪದಲ್ಲಿದೆ;
   (ಎ) ವರ್ತಮಾನ (ಬಿ) ಭೂತ (ಸಿ) ಭವಿಷ್ಯತ್ (ಡಿ) ಭೂತಭವಿಷ್ಯ

**II.** ಈ ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ. . $1 \times 4 = 4$

7. ನಿತ್ಯ : ಅನಿತ್ಯ : : ಸತ್ಯ : ..................
8. ಛವಿ : ಕಾಂತಿ : : ಬಿನ್ನಹ : ..........................................
9. ಕವಿ : ಕಬ್ಬಿಗ : : ಸೊಡೆ : ..........................................
10. ಷಟ್ಪದಿ : ಆರು ಪಾದಗಳು : : ಕಂದ ಪದ್ಯ : ..................................................

**II.** ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. $1 \times 7 = 7$

11. ಡಿ.ವಿ.ಜಿ.ಯವರ ಯಾವ ಕೃತಿ ಮೌಲ್ವಿಯ ಬಾಯಿಗೆ ಪೂರ್ತಿ ಬರುತಿತ್ತು?
12. ಜಯಪುರದ ಪೂರ್ವದ ರಾಜಧಾನಿ ಯಾವುದು?
13. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು?
14. ರಾಧಾಕೃಷ್ಣನ್ ಅವರ ಜನ್ಮ ದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತಿದೆ?
15. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು?
16. ಯಾವ ದೇವತೆಯ ಹೆಸರಿನಲ್ಲಿ ಜಾತ್ರೆಯು ನಡೆಯುತ್ತಿತ್ತು?
17. ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳಾವುವು?

**III.** ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. $2 \times 10 = 20$

18. ಕನ್ನಡ ಮೌಲ್ವಿಯ ವೇಷಭೂಷಣ ಹೇಗಿತ್ತು?
19. ಲೇಖಕರು ನೋಡಿದ ಜನಪದ ನೃತ್ಯದ ಸೊಬಗನ್ನು ಚಿತ್ರಿಸಿ.
20. ಜೈನಧರ್ಮದ ರಕ್ಷಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳಾವುವು?
21. ಸ್ಟಾಲಿನ್ ಅವರು ರಾಧಾಕೃಷ್ಣನ್ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಏನು ಹೇಳಿದರು?
22. ಧ್ಯಾನ ಬೇಸರಾದಾಗ ಏನು ಮಾಡುತ್ತೇನೆಂದು ಕವಿ ಹೇಳುತ್ತಾನೆ?

KRCRS Todalabagi

23. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?
24. ಜಯಪುರದ ಬೀದಿ ಹಾಗೂ ಮನೆಗಳ ಸೌಂದರ್ಯವನ್ನು ವರ್ಣಿಸಿ.
25. ಪಂಢರಿಬಾಯಿ ನಾಟಕ ರಂಗಕ್ಕೆ ಪ್ರವೇಶಿಸಬೇಕಾಗಿ ಬಂದದ್ದು ಯಾಕೆ?
26. ಹೆಂಗಸರು ಗೋಲಾಗಿ ನಿಂತು ಹಾಡುತ್ತಿದ್ದ ಭುಲಾಯಿ ಹಾಡು ಯಾವುದು?
27. ಪಂಢರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?

**IV.** ಈ ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. $2 \times 3 = 6$

28. ಗೊರೂರು ರಾಮಸ್ವಾಮಿ ಅಯ್ಯಂಗಾರ.
29. ಸು.ರಂ. ಎಕ್ಕುಂಡಿ.

**V.** ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. $1 \times 3 = 3$

30. ಅಂತು ದೊರೆವೆತ್ತು ಬಂದ ವ
ಸಂತದೊಳಾ ಮಾರಿದತ್ತನುಂ ಪುರಜನಮುಂ

**VI.** ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. $1 \times 3 = 3$

31. "ಬಾನಿನಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು"

**VII.** ಈ ಕೆಳಗಿನ ಗಾದೆಗಳಲ್ಲಿ ಯಾವುದಾದರು ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. $1 \times 3 = 3$

32. ತುಂಬಿದ ಕೊಡ ತುಳುಕುವುದಿಲ್ಲ,

ಅಥವಾ

ಮಿಂಚಿಹೋದ ಕಾರ್ತಕ್ಕೆ ಚಿಂತಿಸಿ ಫಲವೇನು?

**VIII.** ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. $6 \times 3 = 18$

33. "ನಿಮಗೆ ಕನ್ನಡ ಬರುತ್ತದೆಯೇ?"
34. "ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ"
35. "ಪಾಷಂಡ ಸಾಗರ ಮಹಾಬಡವಾಮುಖಾಗ್ನಿಃ"
36. "ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ ಬಾನು ಬುವಿ ಬೆಳಗಬೇಕು"
37. "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"
38. "ಚಂದಿರನೋ ಭಾಸ್ಕರನೋಯೆಂಬಂತೆ"

**IX.** ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ. $1 \times 4 = 4$

39. ಜಾತಿ–ಕುಲ .............................. ಉನ್ನತೋನ್ನತ ............................
.............................................. ..............................................
.............................................. ಅಥವಾ ..............................................
........................... ಗುಡುಗಬೇಕು. ...........................ಬೆನ್ನಟ್ಟಬೇಕು.

**X.** ಈ ಕೆಳಗಿನ ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. $1 \times 4 = 4$

40. ಆ ವಿಭುವೊಂದಿನದುದಯದೊಳೆದ್ದು
ದೇವತಾರ್ಚನೆಯನು ಮಾಡಿ
ಚಾವಡಿಗೈದಿ ತಾನೋಲಗವಾದೊಂದು
ಶ್ರೀವಿಲಾಸವನೇನನೆಂಬೆ

**XI.** ಈ ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. $2 \times 4 = 8$

KPCRS Todalabagi

41. ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.

ಅಥವಾ

ಹಿಂದೂ ಧರ್ಮ ಮತ್ತು ತತ್ತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅಭಿಪ್ರಾಯವೇನು? ವಿವರಿಸಿ.

42. 'ನಿಯತಿಯನಾರ್ ಮೀಱಿದಪರ್' ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

XII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ. $2 + 2 = 4$

43. ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ "ವಿದೇಶಿ ವಸ್ತುಗಳ ಬಹಿಷ್ಕಾರ; ಸ್ವದೇಶಿ ವಸ್ತುಗಳ ಪುರಸ್ಕಾರ" ಚಳುವಳಿಯಲ್ಲಿ ದುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ, ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನೂ ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ, ನಮ್ಮ ಸಂಸ್ಕೃತಿಯನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳುವಳಿ'ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳವಳಿಯಲ್ಲಿಯೂ ದುಮುಕಿ ಧಾರವಾಡದಲ್ಲ 'ಕರ್ನಾಟಕ ನೂತನ ವಿದ್ಯಾಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

ಪ್ರಶ್ನೆಗಳು : –

1. ಆಲೂರು ವೆಂಕಟರಾಯರು ಸ್ವದೇಶಿ ಚಳವಳಿಯ ಮೂಲಕ ಹೇಗೆ ಮಾದರಿ ಎನಿಸಿದರು?
2. ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು?

ಈ ಕೆಳಗಿನ ಯಾವುದಾದರು ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. $1 \times 5 = 5$

44. ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಮಹೇಶ/ಶಾರಧಾ ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ವಿಜಯಪೂರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಹರೀಶ/ಗಿರೀಜಾ ಎಂದು ಭಾವಿಸಿಕೊಂಡು, ಹೊಸ ವರ್ಷದ ಶುಭಾಶಯ ಕೋರಿ ಹುಬ್ಬಳ್ಳಿಯಲ್ಲಿರುವ ನಿನ್ನ ಸ್ನೇಹಿತ ಗಗನ/ಸರಸ್ವತಿ ಒಂದು ಮನವಿ ಪತ್ರ ಬರೆಯಿರಿ.

XIII. ಕೆಳಗಿನ ಯಾವುದಾದರು ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. $1 \times 5 = 5$

45. ನಿರುದ್ಯೋಗ ಅಥವಾ ಜನಸಂಖ್ಯೆ.

******

KRCRS Ted dabagi